# ಕರ್ನಾಟಕ ಸರ್ಕಾರ

ಸಂ.SFS-5/ರಿಚಿವಿ/ಮಾ.ಸೂ/ಹಿಂಬೇ/2018-19

ಕೃಷಿ ಇಲಾಖೆ,
ಶೇಷಾದ್ರಿ ರಸ್ತೆ, ಬೆಂಗಳೂರು,
ದಿನಾಂಕ 01-09-2018

## ಸುತ್ತೋಲೆ - 1

ವಿಷಯ:- 2018-19ರ ಹಿಂಗಾರು/ಬೇಸಿಗೆ ಹಂಗಾಮಿನಲ್ಲಿ ಇಲಾಖಾ ಕಾರ್ಯಕ್ರಮಗಳಡಿ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ದಾಸ್ತಾನಿಕರಿಸುವ ಬಗ್ಗೆ.

ಉಲ್ಲೇಖ:- 1. ಸರ್ಕಾರದ ಆದೇಶ ಸಂಖ್ಯೆಕೃಇ110ಕೃರಾಗೊ2016, ಬೆಂಗಳೂರು ದಿನಾಂಕ 22.03.2017.
2 .ದಿನಾಂಕ: 01-09-2018 ರಂದು ನಡೆದ ಟೆಂಡರ್ ಅಂಗೀಕಾರ ಸಮಿತಿಯ ಸಭೆಯ ನಡವಳಿಗಳು.

***

2018-19 ನೇ ಸಾಲಿನಲ್ಲಿ ಇಲಾಖೆಯು ಸರ್ಕಾರಿ ಸ್ವಾಮ್ಯದ ಬೀಜೋತ್ಪಾದನಾ ಸಂಸ್ಥೆಗಳಾದ ಕರ್ನಾಟಕ ರಾಜ್ಯ ಬೀಜ ನಿಗಮ, ರಾಷ್ಟ್ರೀಯ ಬೀಜ ನಿಗಮ, ಕರ್ನಾಟಕ ರಾಜ್ಯ ಎಣ್ಣೆಬೀಜ ಬೆಳೆಗಾರರ ಒಕ್ಕೂಟ, ಪ್ರಾದೇಶಿಕ ಎಣ್ಣೆಬೀಜ ಬೆಳೆಗಾರರ ಒಕ್ಕೂಟ, ರಾಯಚೂರು, ಹುಬ್ಬಳ್ಳಿ ಮತ್ತು ಚಿತ್ರದುರ್ಗ ಸಂಸ್ಥೆಗಳೊಂದಿಗೆ ಸೀಡ್ ರೋಲ್ ಪ್ಲಾನ್ ಅಡಿ ಬೀಜ ಪೂರೈಕೆಗಾಗಿ ಉಲ್ಲೇಖ-1 ರ ಪ್ರಕಾರ ಒಡಂಬಡಿಕೆ ಮಾಡಿಕೊಂಡಿರುತ್ತದೆ.

ಉತ್ತರ ಕರ್ನಾಟಕದ ಒಳನಾಡಿನಲ್ಲಿ ಮುಂಗಾರು ದುರ್ಬಲಗೊಂಡಿದ್ದರಿಂದ ಹೆಚ್ಚಿನ ಪ್ರದೇಶದಲ್ಲಿ ಬಿತ್ತನೆಯಾಗದ ವಿಸ್ತೀರ್ಣವು ಹಿಂಗಾರಿ ಬೆಳೆಗಳಿಂದ ಆವೃತವಾಗುವ ಸಾಧ್ಯತೆಯಿರುತ್ತದೆ. ಅಲ್ಲದೆ ಸೆಪ್ಟಂಬರ್ ಮೊದಲನೆ ವಾರದಲ್ಲಿ ಉತ್ತಮ ಮಳೆಯ ನಿರೀಕ್ಷೆಯಿದ್ದು, ಹಿಂಗಾರಿ ಬೆಳೆಗಳ ಬಿತ್ತನೆ ಬೀಜಗಳನ್ನು ಸಕಾಲದಲ್ಲಿ ರೈತ ಸಂಪರ್ಕಗಳಲ್ಲಿ ದಾಸ್ತಾನೀಕರಿಸುವ ಅವಶ್ಯಕತೆಯಿರುತ್ತದೆ.

ಮುಂದುವರೆದು ದಿನಾಂಕ 25.08.2018 ರಂದು ಮಾನ್ಯ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ 2018-19ರ ಹಿಂಗಾರು ಹಂಗಾಮಿಗೆ ಸೆಪ್ಟಂಬರ್ ಮೊದಲನೆ ವಾರದೊಳಗೆ ಬಿತ್ತನೆ ಬೀಜಗಳನ್ನು ಸಮರ್ಪಕವಾಗಿ ದಾಸ್ತಾನೀಕರಿಸಿ ವಿತರಣೆಗೆ ವ್ಯವಸ್ಥೆ ಮಾಡಲು ಸೂಚಿಸಿರುತ್ತಾರೆ. ಒಡಂಬಡಿಕೆ ಮೂಲಕ ಇಲಾಖೆಗೆ ಪೂರೈಸುವ ಬಿತ್ತನೆ ಬೀಜಗಳ ದರ ನಿಗಧಿ ಪ್ರಕ್ರಿಯೆಯು ಚಾಲ್ತಿಯುಲ್ಲಿರುತ್ತದೆ.

ಆದ್ದರಿಂದ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಬಿತ್ತನೆ ಬೀಜಗಳನ್ನು ಪ್ರಥಮ ಆದ್ಯತೆ ಮೇಲೆ ವಿತರಿಸಬೇಕಿರುವುದರಿಂದ ಒಡಂಬಡಿಕೆ ಅಡಿ ಸ್ವತಃ ಬೀಜೋತ್ಪಾದನೆ ಕೈಗೊಂಡ ಪ್ರಮಾಣಿತ ಬಿತ್ತನೆ ಬೀಜಗಳನ್ನು ರೈತ ಸಂಪರ್ಕ ಕೇಂದ್ರಗಳಲ್ಲಿ ದಾಸ್ತಾನೀಕರಿಸಲು ಸೂಚಿಸಿದೆ. ಸದ್ಯದಲ್ಲೆ ಸಂಸ್ಥೆಗಳು ಪೂರೈಸುವ ಬಿತ್ತನೆ ಬೀಜಗಳಿಗೆ ದರಗಳನ್ನು ನಿಗಧಿಪಡಿಸಿ ಜಿಲ್ಲೆಗಳಿಗೆ ಸುತ್ತೋಲೆ ನೀಡಲಾಗುವುದು.

(ಅಪರ ಕೃಷಿ ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ.)

ಕೃಷಿ ನಿರ್ದೇಶಕರು

1. ಪ್ರತಿಯನ್ನು ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಪ್ರತಿಯನ್ನು ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ ರವಾನಿಸಿದೆ.
3. ಪ್ರತಿಯನ್ನು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
4. ಪ್ರತಿಯನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಬೀಜ ನಿಗಮ, ಬೀಜ ಭವನ, ಹೆಬ್ಬಾಳ, ಬೆಂಗಳೂರು ರವರಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
5. ಪ್ರತಿಯನ್ನು ಪ್ರಾದೇಶಿಕ ವ್ಯವಸ್ಥಾಪಕರು, ರಾಷ್ಟ್ರೀಯ ಬೀಜ ನಿಗಮ, , ಹೆಬ್ಬಾಳ, ಬೆಂಗಳೂರು ರವರಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
6. ಪ್ರತಿಯನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಎಣ್ಣೆ ಬೀಜ ಬೆಳೆಗಾರರ ಒಕ್ಕೂಟ, ಬೆಂಗಳೂರು ರವರಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.